**ಹಿರೇಕೆರೂರ ತಾಲೂಕ ವಿದ್ಯಾವರ್ಧಕ ಸೌಹಾರ್ದ ಸಹಕಾರಿ ನಿ., ಹಿರೇಕೆರೂರ–581111**
**ಜಿ: ಹಾವೇರಿ**

## ಮಹಾವಿದ್ಯಾಲಯದ ವಿವರ: 2018–19

ಹಿರೇಕೆರೂರ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ಸೌಲಭ್ಯದ ಅಗತ್ಯತೆಯನ್ನು ಮನಗಂಡು ಊರಿನ ಧುರೀಣರು ಹಾಗು ಸಹಕಾರಿ ಬಂಧುಗಳಾದ ಶ್ರೀ ಡಿ. ಆರ್. ತಂಬಾಕದವರು ವಿದ್ಯಾವರ್ಧಕ ಸಹಕಾರಿ ಸಂಘ ಎಂಬ ಸಂಸ್ಥೆಯನ್ನು 1952ರಲ್ಲಿ ಪ್ರಾರಂಭಿಸಿ ಇದರ ಮೂಲಕ ಹಿರೇಕೆರೂರಿನಲ್ಲಿ ಒಂದು ಪ್ರೌಢಶಾಲೆಯನ್ನು ಸ್ಥಾಪಿಸಿದರು.

ಈ ವಿದ್ಯಾವರ್ಧಕ ಸಹಕಾರಿ ಸಂಘದ ಆಶ್ರಯದಲ್ಲಿ ಈ ಕೆಳಗಿನ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದೇವೆ.

1. **ಶ್ರೀ ತರಳಬಾಳು ಜಗದ್ಗುರು ಶಿಕ್ಷಣ ಮಹಾವಿದ್ಯಾಲಯ ಹಿರೇಕೆರೂರ.**
2. **ಬಿ. ಆರ್. ತಂಬಾಕದ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ ಹಿರೇಕೆರೂರ.**
3. **ಶ್ರೀ ತರಳಬಾಳು ಜಗದ್ಗುರು ಡಿ. ಇಡಿ. ವಿದ್ಯಾಲಯ ಹಿರೇಕೆರೂರ.**
4. **ಕೆ.ಹೆಚ್. ಪಾಟೀಲ ಪದವಿಪೂರ್ವ ಮಹಾವಿದ್ಯಾಲಯ ಹಿರೇಕೆರೂರ.**
5. **ಡಿ. ಆರ್. ಟಿ. ಬಾಲಕರ ಪ್ರೌಢಶಾಲೆ ಹಿರೇಕೆರೂರ.**
6. **ಮಹದೇವ ಕೇಸರಿ ಬಾಲಕಿಯರ ಪ್ರೌಢಶಾಲೆ ಹಿರೇಕೆರೂರ.**
7. **ರೇಣುಕಾ ಪ್ರೌಢಶಾಲೆ ಚಿಕ್ಕಕಬ್ಬಾರ.**
8. **ಮಲ್ಲಿಲಕಾರ್ಜುನ ಪ್ರೌಢಶಾಲೆ ಹೊಸಳ್ಳಿ.**
9. **ಮಾರುತಿ ಪ್ರೌಢಶಾಲೆ ಆಲದಗೇರಿ.**
10. **ಎಸ್. ಎನ್. ಕೆ. ಕನ್ನಡ ಹಾಗೂ ಇಂಗ್ಲೀಷ ಮಾದ್ಯಮ ಹಿರಿಯ ಪ್ರಾಥಮಿಕ ಶಾಲೆ ಹಿರೇಕೆರೂರ.**
11. **ಎಸ್. ಎನ್. ಕೆ ಬಾಲವಾಡಿ ಶಾಲೆ ಹಿರೇಕೆರೂರ.**
12. **ಡಿ. ಆರ್. ತಂಬಾಕದ ಇಂಗ್ಲೀಷ ಮಾದ್ಯಮಿಕ ಪ್ರೌಢಶಾಲೆ ಹಿರೇಕೆರೂರ.**

ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಶಿಕ್ಷಣ ಕೊಡಿಸುವ ಉದ್ದೇಶದಿಂದ ಒಂದು (ಬಿ. ಇಡಿ) ಶಿಕ್ಷಣ ಮಹಾವಿದ್ಯಾಲಯವನ್ನು ಪ್ರಾರಂಭಿಸುವ ಸಲುವಾಗಿ ಪ್ರಯತ್ನಗಳು ನಡೆದು 2003 ರಲ್ಲಿ ಸರಕಾರವು ಬಿ.ಇಡಿ ಶಿಕ್ಷಣ ಮಹಾವಿದ್ಯಾಲಯವನ್ನು ಸ್ಥಾಪಿಸಲು ನಮ್ಮ ಸಂಸ್ಥೆಗೆ ಅನುಮತಿ ಕೊಟ್ಟಿದ್ದು ಹೆಮ್ಮೆಯ ವಿಷಯ. 2004–05 ರಲ್ಲಿ ನಮ್ಮ ಸಂಸ್ಥೆಯು ಶ್ರೀ ತರಳಬಾಳು ಜಗದ್ಗುರು ಶಿಕ್ಷಣ ಮಹಾವಿದ್ಯಾಲಯವೆಂದು ಪ್ರಾರಂಭಿಸಿತು.

2004–05ನೇ ಸಾಲಿನ ಶೈಕ್ಷಣಿಕ ವರ್ಷದಿಂದ ನಮ್ಮ ಶಿಕ್ಷಣ ಮಹಾವಿದ್ಯಾಲಯ ಶಿಕ್ಷಣಾರ್ಥಿಗಳಿಗೆ ತರಬೇತಿ ಕೊಡಲು ಅವಕಾಶ ಮಾಡಿ ಕೊಟ್ಟಿದೆ. ಮೊದಲ ವರ್ಷದ ಶೈಕ್ಷಣಿಕ ಅವಧಿಯ ಉತ್ತಮ ಫಲಿತಾಶದಿಂದ ಮೂಡಿಬಂದಿತು. ಸುಮಾರು 44 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆಯುವುದರ ಮೂಲಕ ಮೊದಲ ವರ್ಷದಲ್ಲಿಯೇ ಮಹಾವಿದ್ಯಾಲಯದ ಕೀರ್ತಿಯನ್ನು ಎತ್ತಿಹಿಡಿದಿದ್ದಾರೆ. 2006–07ನೇ ಸಾಲಿನಲ್ಲಿ ನಮ್ಮ ಮಹಾವಿದ್ಯಾಲಯದ ಫಲಿತಾಂಶವು ಉತ್ತಮವಾಗಿದ್ದು 59 ಡಿಸ್ಟಿಂಕ್ಷನ್ 38 ಪ್ರ ಮತ್ತು 3ದ್ವಿ ದರ್ಜೆಯಲ್ಲಿ, 2007–08 ನೇ ಸಾಲಿನಲ್ಲಿ 50ಡಿ, 48ಪ್ರ ಮತ್ತು 2ದ್ವೀತಿಯ ದರ್ಜೆಯಲ್ಲಿ, 2008–09 ನೇ ಸಾಲಿನಲ್ಲಿ 39ಡಿ 44 ಪ್ರ 7ದ್ವಿತೀಯ ದರ್ಜೆಯಲ್ಲಿ, ಒಟ್ಟು 90 ವಿದ್ಯಾರ್ಥಿಗಳು, 2009–10 ನೇ ಸಾಲಿನಲ್ಲಿ 26 ಡಿ, 59 ಪ್ರ, 09 ದ್ವಿತೀಯ ಒಟ್ಟು 95, ವಿದ್ಯಾರ್ಥಿಗಳು, 2010–11 ನೇ ಸಾಲಿನಲ್ಲಿ 43 ಡಿ, 36 ಪಪ್ರ, 05 ದ್ವಿತೀಯ ಒಟ್ಟು 84, 2011–12 ನೇ ಸಾಲಿನಲ್ಲಿ 46 ಡಿ, 44 ಪ್ರ, 01 ದ್ವಿತೀಯ ಒಟ್ಟು 97 ವಿದ್ಯಾರ್ಥಿಗಳು, 2012–13 ನೇ ಸಾಲಿನಲ್ಲಿ 61 ಡಿ, 26 ಪ್ರ, 06 ದ್ವಿ ಒಟ್ಟು 93 ವಿದ್ಯಾರ್ಥಿಗಳು, 2013–14 ನೇ ಸಾಲಿನಲ್ಲಿ 71 ಡಿ, 20 ಪ್ರಥಮ, 02 ದ್ವಿತೀಯ ಒಟ್ಟು 93 ಹಾಗೂ 2014–15 ರಲ್ಲಿ 74 ಡಿ, 16 ಪ್ರ, 04 ದ್ವಿತೀಯ ಒಟ್ಟು 94 ವಿದ್ಯಾರ್ಥಿಗಳು ಉತ್ತೀರ್ಣರಾಗಿರುವರು 2016–17 ರಲ್ಲಿ 56 ಡಿ, 06 ಪ್ರಥಮ ಒಟ್ಟು 62 ವಿದ್ಯಾರ್ಥಿಗಳು ಉತ್ತೀರ್ಣರಾಗಿರುವರು, 2017–18 ರಲ್ಲಿ 59ಡಿ, 05 ಪ್ರಥಮ, ಒಟ್ಟು 66 ವಿದ್ಯಾರ್ಥಿಗಳು ಉತ್ತೀರ್ಣರಾಗಿರುವರು. ಸದರಿ ಶೈಕ್ಷಣಿಕ ವರ್ಷದ ಫಲಿತಾಂಶ ಉತ್ತಮವಾಗಿರುವುದು ಹೆಮ್ಮೆಯ ಸಂಗತಿ.

ಸಂಸ್ಥೆಯು ಉತ್ತಮ ಸುಸಜ್ಜಿತವಾದ ಕೊಠಡಿಗಳನ್ನು ಹೊಂದಿದ್ದು ಬೃಹತ್ ಪ್ರಮಾಣದ 3 ಗ್ರಂಥಾಲಯಗಳನ್ನು ಹಾಗೂ ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮಗಳ ಸಲುವಾಗಿ ರಂಗ ಮಂಟಪ ಹಾಗೂ ವಿಶಾಲವಾದ ಆಟದ ಮೈದಾನ ಹೊಂದಿರುತ್ತದೆ. ಈ ಶಿಕ್ಷಣ ಸಂಸ್ಥೆಯಲ್ಲಿ ಬಾಲವಾಡಿಯಿಂದ ಬಿ.ಇಡಿ. ವರೆಗೆ

ಸುಮಾರು 8000 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳ ಉನ್ನತ ಅಭಿವೃದ್ಧಿಗಾಗಿ ಸುಮಾರು 275 ಜನ ನುರಿತ ಹಾಗೂ ಅನುಭವವುಳ್ಳ ಉಪನ್ಯಾಸಕರು ಹಾಗೂ ಶಿಕ್ಷಕರು ಮತ್ತು ಬೋಧಕೇತರ ಸಿಬ್ಬಂದಿಯವರು ಸೇವೆ ಸಲ್ಲಿಸುತ್ತಿದ್ದಾರೆ. ಈ ಶಿಕ್ಷಣ ಮಹಾವಿದ್ಯಾಲಯದ ವೈಶಿಷ್ಟಗಳು ಈ ಕೆಳಗಿನಂತಿವೆ.

1. **ಬೋಧನಾ ವಿಷಯ**: ಈ ಶಿಕ್ಷಣ ಮಹಾವಿದ್ಯಾಲಯದಲ್ಲಿ ಅನೇಕ ವಿಷಯಗಳನ್ನು ಬೋಧಿಸಲು ಕ್ರಮ ಕೈಗೊಳ್ಳಲಾಗಿದೆ. ನಮ್ಮ ಮಹಾವಿದ್ಯಾಲಯದಲ್ಲಿ ಕಡ್ಡಾಯ ವಿಷಯಗಳಾದ ಶಿಕ್ಷಣ –1, ಶಿಕ್ಷಣ –2, ಶಿಕ್ಷಣ –3, ಶಿಕ್ಷಣ 4 ಮತ್ತು ಗಣಕಯಂತ್ರ (ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ) ಶಿಕ್ಷಣ ಇವಲ್ಲದೇ ಬೋಧನ ಪದ್ಧತಿಗಳಾದ ಕನ್ನಡ, ಇಂಗ್ಲೀಷ, ಹಿಂದಿ, ಇತಿಹಾಸ. ಭೂಗೋಳಶಾಸ್ತ್ರ, ಉರ್ದು, ಭೌತವಿಜ್ಞಾನ, ಜೀವವಿಜ್ಞಾನ, ರಸಾಯನಶಾಸ್ತ್ರ ಗಣಿತ, ವಾಣಿಜ್ಯ ವಿಷಯಗಳನ್ನು ಹಾಗೂ ಮೌಲ್ಯ ಶಿಕ್ಷಣ, ಯೋಗ ಶಿಕ್ಷಣ, ಮಾರ್ಗದರ್ಶನ & ಸಲಹೆ ವಿಷಯಗಳನ್ನು ಬೋಧಿಸುವ ವ್ಯವಸ್ಥೆ ಮಾಡಲಾಗಿದೆ. ಇವುಗಳಲ್ಲದೇ ಮನೋವಿಜ್ಞಾನ, ತಂತ್ರಜ್ಞಾನ ಹಾಗೂ ವಿಜ್ಞಾನ ಪ್ರಯೋಗಾಲಯಗಳನ್ನು ಹೊಂದಿದೆ. ಈ ವಿಷಯಗಳನ್ನು ಬೋಧಿಸಲು ಅನುಭವಿ ನುರಿತ ಉಪನ್ಯಾಸಕರುಗಳನ್ನು ನೇಮಿಸಲಾಗಿದೆ.

   ನಮ್ಮ ಪ್ರಶಿಕ್ಷಣಾರ್ಥಿಗಳಿಗೆ ಪ್ರಾತ್ಯಕ್ಷಿಕ ಪಾಠಗಳನ್ನು ಕೊಡಲು ನಮ್ಮ ಸಂಸ್ಥೆಯ ಆವರಣದಲ್ಲಿಯ ಪ್ರೌಢಶಾಲೆಗಳು ಹಾಗೂ ಹಿರೇಕೆರೂರಿನ ಸುತ್ತಮುತ್ತಲಿನ ಪ್ರೌಢಶಾಲೆಗಳು ಅನುಕೂಲಕರವಾಗಿದ್ದು ಆ ಶಾಲೆಯ ಮುಖ್ಯೋಪಾದ್ಯಾಯರು ಸಹಶಿಕ್ಷಕರು ವಿದ್ಯಾರ್ಥಿಗಳಿಗೆ ಸಹಕರಿಸುತ್ತಾ ಬಂದಿದ್ದಾರೆ.

2. **ವಿದ್ಯಾರ್ಥಿಗಳ ಸಂಖ್ಯೆ** : ನಮ್ಮ ಶಿಕ್ಷಣ ಮಹಾವಿದ್ಯಾಲಯದಲ್ಲಿ 2004–05ನೇ ಸಾಲಿನಲ್ಲಿ ಸರಕಾರಿ ಮತ್ತು ಆಡಳಿತ ಮಂಡಳಿಯ ಕೋಟಾದಿಂದ ಒಟ್ಟು 100 ವಿದ್ಯಾರ್ಥಿಗಳು ಅಭ್ಯಾಸ ಮಾಡಿರುತ್ತಾರೆ. 2005–06ನೇ ಸಾ`ಲಿನಲ್ಲಿ ಸ. ಕೊ 50 ವಿದ್ಯಾರ್ಥಿಗಳು & ಆ.ಮ ಕೊ 33 ವಿದ್ಯಾರ್ಥಿಗಳು ಒಟ್ಟು 83 ವಿದ್ಯಾರ್ಥಿಗಳು, 2006–07ನೇ ಸಾಲಿನಲ್ಲಿ ಸ. ಕೋ 50 ವಿದ್ಯಾರ್ಥಿಗಳು & ಆ.ಮ ಕೊ 50 ವಿದ್ಯಾರ್ಥಿಗಳು ಒಟ್ಟು 100 ವಿದ್ಯಾರ್ಥಿಗಳು, 2007–08 ನೇ 50 ಸ. ಕೊ ವಿದ್ಯಾರ್ಥಿಗಳು ಮತ್ತು ಆ.ಮ ಕೊ 50 ವಿದ್ಯಾರ್ಥಿಗಳು ಒಟ್ಟು 100 ವಿದ್ಯಾರ್ಥಿಗಳು, 2008–09ನೇ ಸಾಲಿನಲ್ಲಿ ಸ. ಕೊ 49 ವಿದ್ಯಾರ್ಥಿಗಳು ಮತ್ತು ಆ.ಮ ಕೊ 47 ವಿದ್ಯಾರ್ಥಿಗಳು ಒಟ್ಟು 96 ವಿದ್ಯಾರ್ಥಿಗಳು, 2009–10 ನೇ ಸಾಲಿಗೆ ಸ. ಕೊ 47 ವಿದ್ಯಾರ್ಥಿಗಳು & ಆ.ಮ ಕೊ 50 ವಿದ್ಯಾರ್ಥಿಗಳು ಒಟ್ಟು 97 ವಿದ್ಯಾರ್ಥಿಗಳು, 2010–11 ನೇ ಸಾಲಿನಲ್ಲಿ ಸ. ಕೊ 44 ವಿದ್ಯಾರ್ಥಿಗಳು ಮತ್ತು ಆ.ಮ ಕೊ 42 ವಿದ್ಯಾರ್ಥಿಗಳು ಒಟ್ಟು 86 ವಿದ್ಯಾರ್ಥಿಗಳು, 2011–12 ನೇ ಸಾಲಿನಲ್ಲಿ ಸ. ಕೊ 44 ವಿದ್ಯಾರ್ಥಿಗಳು ಮತ್ತು ಆ.ಮ ಕೊ 50+5 ವಿದ್ಯಾರ್ಥಿಗಳು ಒಟ್ಟು 99 ವಿದ್ಯಾರ್ಥಿಗಳು, 2012–13 ನೇ ಸಾಲಿನಲ್ಲಿ ಸ. ಕೊ 43 ವಿದ್ಯಾರ್ಥಿಗಳು ಮತ್ತು ಆ.ಮ ಕೊ 50+7 ವಿದ್ಯಾರ್ಥಿಗಳು ಒಟ್ಟು 100 ವಿದ್ಯಾರ್ಥಿಗಳು, 2013–14 ನೇ ಸಾಲಿನಲ್ಲಿ ಸ.ಕೊ 47 ವಿದ್ಯಾರ್ಥಿಗಳು ಮತ್ತು ಆ.ಮ ಕೊ 50 ವಿದ್ಯಾರ್ಥಿಗಳು ಒಟ್ಟು 97 ವಿದ್ಯಾರ್ಥಿಗಳು, 2014–15 ನೇ ಸಾಲಿನಲ್ಲಿ ಸ. ಕೊ 48 ವಿದ್ಯಾರ್ಥಿಗಳು ಮತ್ತು ಆ.ಮ ಕೊ 52 ವಿದ್ಯಾರ್ಥಿಗಳು ಒಟ್ಟು 100 ವಿದ್ಯಾರ್ಥಿಗಳು, 2015–16 ರಲ್ಲಿ ಸ. ಕೋ 46 ಮತ್ತು ಆ. ಮ ಕೋಟಾದಿಂದ 29 ಒಟ್ಟು 75 ವಿದ್ಯಾರ್ಥಿಗಳು 2016–17 ಸ.ಕೋ 41 ಆ.ಮ 29 ಒಟ್ಟು 70 ವಿದ್ಯಾರ್ಥಿಗಳು 2017–18 ರಲ್ಲಿ ಸ. ಕೋ 39 ಮತ್ತು ಆ. ಮ ಕೋಟಾದಿಂದ 36 ಒಟ್ಟು 75 ವಿದ್ಯಾರ್ಥಿಗಳು, 2018–19 ರಲ್ಲಿ ಸ. ಕೋ 43 ಮತ್ತು ಆ. ಮ ಕೋಟಾದಿಂದ 22 ಒಟ್ಟು 65 ವಿದ್ಯಾರ್ಥಿಗಳು ಪ್ರವೇಶ ಪಡೆದು ತರಬೇತಿ ಪಡೆಯುತ್ತಿದ್ದಾರೆ.

3. **ಗ್ರಂಥಾಲಯ** : ನಮ್ಮ ಶಿಕ್ಷಣ ಮಹಾವಿದ್ಯಾಲಯವು ಪ್ರಶಿಕ್ಷಣಾರ್ಥಿಗಳ ಜ್ಞಾನದಾಹವನ್ನು ಹೆಚ್ಚಿಸಲು ಸುಸಜ್ಜಿತವಾದ ಕಟ್ಟಡದಲ್ಲಿ ಉತ್ತಮ ಆಸನದ ವ್ಯವಸ್ಥೆ ಹೊಂದಿರುವ ಗ್ರಂಥಾಲಯವನ್ನು ಹೊಂದಿದೆ. ಇದಕ್ಕಾಗಿ ಸುಮಾರು 7,03,472=00 ರೂ ಮೌಲ್ಯದ ಸುಮಾರು 5347 ಪುಸ್ತಕಗಳನ್ನು ಖರೀದಿಸಲಾಗಿದೆ. ಹಾಗೂ ಪ್ರಶಿಕ್ಷಣಾರ್ಥಿಗಳ ಸಾಮಾನ್ಯ ಜ್ಞಾನ ಹೆಚ್ಚಿಸಲು ದಿನಪತ್ರಿಕೆಗಳು, ಮಾಸಪ್ತ್ರಿಕೆಗಳು ಹಾಗೂ ವಾರ

ಪತ್ರಿಕೆಗಳು ಗ್ರಂಥಾಲಯದಲ್ಲಿ ಅಭ್ಯಸಿಸಲು ವ್ಯವಸ್ಥೆ ಕಲ್ಪಿಸಿಕೊಡಲಾಗಿದೆ. ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

4. **ವಸತಿ ನಿಲಯ ವ್ಯವಸ್ಥೆ :** ನಮ್ಮ ಶಿಕ್ಷಣ ಮಹಾವಿದ್ಯಾಲಯವು ವಿದ್ಯಾರ್ಥಿನಿಯರಿಗಾಗಿ ಪ್ರತ್ಯೇಕವಾದ ವಸತಿನಿಲಯವನ್ನು ಹೊಂದಿದ್ದು ಸುಮಾರು 15 ಕೊಠಡಿಗಳನ್ನು ಹೊಂದಿದೆ. ಗ್ರಾಮೀಣ ಹಾಗೂ ದೂರದ ಪ್ರದೇಶಗಳಿಂದ ಅಭ್ಯಾಸ ಮಾಡುವ ವಿದ್ಯಾರ್ಥಿನಿಯರ ವಸತಿ ನಿಲಯದ ವ್ಯವಸ್ಥೆಯ ಉಪಯೋಗವನ್ನು ಪಡೆಯುತ್ತಿದ್ದಾರೆ.

5. **ಕ್ರೀಡಾ ಚಟುವಟಿಕೆ :** ಮಹಾವಿದ್ಯಾಲಯವು ಹಲವಾರು ಕ್ರೀಡಾ ಸಾಮಗ್ರಿಗಳನ್ನು ಹೊಂದಿರುತ್ತದೆ. ಪ್ರಶಿಕ್ಷಣಾರ್ಥಿಗಳು ಅದರ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ನಮ್ಮ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳಲ್ಲಿ ಸ್ಪರ್ಧಾ ಮನೋಭಾವನೆಯನ್ನು ಮೂಡಿಸಲು ಪ್ರತಿವರ್ಷವೂ ವಾರ್ಷಿಕ ಕ್ರೀಡಾಕೂಟವನ್ನು ಏರ್ಪಡಿಸುತ್ತಾ ಬಂದಿರುತ್ತೇವೆ. ವಾರ್ಷಿಕ ಕ್ರೀಡಾಕೂಟದಲ್ಲಿ ಭಾಗವಹಿಸಿ ವಿಜೇತರಾದ ಪ್ರಶಿಕ್ಷಣಾರ್ಥಿಗಳಿಗೆ ಮಹಾವಿದ್ಯಾಲಯವು ಬಹುಮಾನಗಳನ್ನು ನೀಡುತ್ತಾ ಉತ್ಸಾಹದ ಮನೋಭಾವನೆಯನ್ನು ಮೂಡಿಸುತ್ತಾ ಬಂದಿರುತ್ತೇವೆ. ಅದೇ ರೀತಿ ಸದರಿ ವರ್ಷ **ಆರ್.ಟಿ.ಇ.ಎಸ್ ಶಿಕ್ಷಣ ಮಹಾವಿದ್ಯಾಲಯ ರಾಣೆಬೆನ್ನೂರನಲ್ಲಿ ಜರುಗಿದ ಹಾವೇರಿ ಜಿಲ್ಲಾ ಮಟ್ಟದ ಕ್ರೀಡಾಕೂಟಗಳು ಹಾಗೂ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ನಮ್ಮ ಮಹಾವಿದ್ಯಾಲಯವು ಪುರುಷರ ಖೋ-ಖೋ ಪ್ರಥಮ, ಮಹಿಳಾ ಖೋ-ಖೋ ದ್ವಿತೀಯ ಸ್ಥಾನ** ಪಡೆಯುವುದರ ಜೊತೆಗೆ ವಯಕ್ತಿಕ ಆಟಗಳಲ್ಲಿ ಬಹುಮಾನ ಪಡೆದಿರುತ್ತಾರೆ. ಅದೇ ರೀತಿ 2016-17 ನೇ ಸಾಲಿನ ಶೈಕ್ಷಣಿಕ ವರ್ಷದ ಕೊನೆಯಲ್ಲಿ ನಮ್ಮ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳಿಗೆ 03 ದಿನಗಳ ಕಾಲ ವಾರ್ಷಿಕ ಕ್ರೀಡಾಕೂಟಗಳನ್ನು ಹಮ್ಮಿಕೊಳ್ಳಲಾಗಿತ್ತು. ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರಮಾಣ ಪತ್ರ ಹಾಗೂ ಮೆಡಲ್‌ಗಳನ್ನು ನೀಡಿ ಗೌರವಿಸಲಾಯಿತು.

6. **ಪೌರತ್ವ ತರಬೇತಿ ಶಿಬಿರ :** ಮಹಾವಿದ್ಯಾಲಯವು 2005-06ನೇ ಸಾಲಿನಲ್ಲಿ ಪೌರತ್ವ ತರಬೇತಿ ಕಾರ್ಯಕ್ರಮವನ್ನು ತಿಪ್ಪಾಯಿಕೊಪ್ಪ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿತ್ತು. ಪಸ್ತುತ 2016-17 ನೇ ಸಾಲಿನಲ್ಲಿ ಹಿರೇಕೆರೂರಿನ ಶ್ರೀ ತರಳಬಾಳು ಸ್ಕೂಲ್ ಶಾಂತಿಧಾಮದ ಆವರಣದಲ್ಲಿ ಪೌರತ್ವ ತರಬೇತಿ ಶಿಬಿರವನ್ನು ಹಮ್ಮಿಕೊಂಡಿದ್ದು, ಪ್ರಶಿಕ್ಷಣಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡಿದ್ದರು ಹಾಗೂ ಸಾಯಂಕಾಲ ಉತ್ತಮವಾದ ನೈತಿಕ, ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಂಡು ಪೌರತ್ವ ತರಬೇತಿ ಶಿಬಿರದ ಉದ್ದೇಶವನ್ನು ಹೆಚಹಚಿಸಿದರು. ಹಾಗೂ ಉಪನ್ಯಾಸ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅದರಲ್ಲಿ ಅನುಭವಿ ಉಪನ್ಯಾಸಕ ವರ್ಗದವರನ್ನು, ಕಾನೂನು ಪರಿಣಿತರನ್ನು, ವೈದ್ಯಕೀಯ ಅಧಿಕಾರಿಗಳನ್ನು ಕರೆತಂದು ಪ್ರಶಿಕ್ಷಣಾರ್ಥಿಗಳಿಗೆ ಹಾಗೂ ಜನರಲ್ಲಿ ಸಾಕ್ಷರತಾ ಮನೋಭಾವದ ಹಲವಾರು ವಿಷಯಗಳ ಜ್ಞಾನವನ್ನು ನೀಡಲಾಯಿತು.

7. **ವಿದ್ಯಾರ್ಥಿ ಸಂಘಗಳು :** ಮಹಾವಿದ್ಯಾಲಯವು ಪ್ರಶಿಕ್ಷಣಾರ್ಥಿಗಳಲ್ಲಿ ರಾಜಕೀಯ ಪ್ರಜ್ಞೆ ಮೂಡಿಸಲು ಪ್ರತಿವರ್ಷವೂ ವಿದ್ಯಾರ್ಥಿ ಸಂಘಗಳ ರಚನೆಯನ್ನು ಮಾಡುತ್ತಾ ಬಂದಿದ್ದು ವಿದ್ಯಾರ್ಥಿಗಳ ಹಾಗೂ ಮಹಾವಿದ್ಯಾಲಯದ ದೃಷ್ಟಿಯಿಂದ ಹಲವಾರು ವಿಭಾಗಗಳನ್ನು ರಚಿಸಿ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ನೇಮಿಸುತ್ತ ಅದರ ವಿಭಾಗದ ಮಹತ್ವ ಹಾಗೂ ಕಾರ್ಯದ ನಿರ್ವಹಣೆ ಕುರಿತು ಉಪನ್ಯಾಸಕರು ಉತ್ತಮವಾದ ಸಲಹೆ ಸೂಚನೆಗಳನ್ನು ನೀಡುತ್ತಾ ವಿದ್ಯಾರ್ಥಿಗಳ ಸ್ನೇಹ ಪ್ರಜ್ಞೆಯನ್ನು ಹೆಚ್ಚಿಸುತ್ತ ಬಂದಿರುತ್ತದೆ.

8. **ವಿಜ್ಞಾನ ಸಂಘ :** ಮಹಾವಿದ್ಯಾಲಯವು ಪ್ರಶಿಕ್ಷಣಾರ್ಥಿಗಳಲ್ಲಿ ವೈಜ್ಞಾನಿಕ ಮನೊಭಾವವನ್ನು ಮೂಡಿಸಲು ವೈಜ್ಞಾನಿಕಲೋಕದಲ್ಲಿ ಸಾಧನೆಗೈದ ಸಾಧಕರ ಗುಣಗಾನ ಮಾಡುವುದರ ಜೊತೆಗೆ ವಿಜ್ಞಾನಿಗಳಿಂದ ದೇಶಕ್ಕೆ ಹಾಗೂ ಜಗತ್ತಿಗೆ ಆದ ಲಾಭದ ಬಗ್ಗೆ ಚಂತನೆ ನಡೆಸುವುದು ವಿಜ್ಞಾನ ವಸ್ತು ಪ್ರದರ್ಶನ, ರಸಪ್ರಶ್ನೆ, ವಿಜ್ಞಾನ

ಮೇಳ, ನುರಿತ ಉಪನ್ಯಾಸಕರಿಂದ ತರಬೇತಿ ನೀಡುವುದು ವಿಜ್ಞಾನದ ಮಹತ್ವ ಮತ್ತು ನಿರ್ವಹಣೆ ಬಗ್ಗೆ ತಿಳಿಸುತ್ತಾ ಬಂದಿದೆ.

9. **ಇತಿಹಾಸ ಸಂಘ :** ನಮ್ಮ ಮಹಾವಿದ್ಯಾಲಯದಲ್ಲಿ ಪ್ರಶಿಕ್ಷಣಾರ್ಥಿಗಳಲ್ಲಿ ಐತಿಹಾಸಿಕ ಮನೊಭಾವನೆ ಬೆಳೆಸಲು ಹಾಗೂ ಇತಿಹಾಸದ ಬಗ್ಗೆ ಜಾಗೃತಿ ಮುಡಿಸಲು ಇತಿಹಾಸ ಸಂಘವನ್ನು ಸ್ಥಾಪಿಸಲಾಯಿತು ಈ ಸಂಘದಡಿಯಲ್ಲಿ ಪ್ರವಾಸ ರಸಪ್ರಶ್ನೆ ಐತಿಹಾಸಿಕ ವಸ್ತುಗಳ ಸಂಗ್ರಹಣೆ ಅಣಕು ಸಂಸತ್ತು ಮುಂತಾದ ಕಾಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು

10. **ಪರಿಸರ ಸಂಘ :** ನಮ್ಮ ಮಹಾವಿದ್ಯಾಲಯದಲ್ಲಿ ಪರಿಸರ ಸಂಘವನ್ನು ಸ್ಥಾಪಿಸಿ ಪರಿಸರ ರಕ್ಷಣೆಯ ಬಗ್ಗೆ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು.

11. **ಸಾಂಸ್ಕೃತಿಕ ಚಟುವಟಿಕೆ :** ಪ್ರಶಿಕ್ಷಣಾರ್ಥಿಗಳಿಗೆ ಮನರಂಜನೆ ನೀಡಲು ಪ್ರತಿ ಬುಧವಾರದಂದು ಸಿ.ಸಿ.ಎ ಕಾರ್ಯಕ್ರಮವನ್ನು ಹಮ್ಮಿಕೊಂಡು ವಿವಿಧ ವಿದ್ಯಾರ್ಥಿಗಳ ಆಸಕ್ತಿಗನುಗುಣವಾಗಿ ಅವರಲ್ಲಿ ಅಡಗಿರುವ ಕಲಾಪ್ರತಿಭೆಯನ್ನು ಹೊರತರುವದಾಗಿದೆ. **2014–15 ನೇ ಸಾಲಿನ ಶ್ರೀ ಕುಮಾರೇಶ್ವರ ಬಿ.ಇಡಿ ಮಹಾವಿದ್ಯಾಲಯ ಹಾನಗಲ್‌ನಲ್ಲಿ ಜರುಗಿದ ಹಾವೇರಿ ಜಿಲ್ಲಾ ಬಿ.ಇಡಿ ಮಹಾವಿದ್ಯಾಲಯಗಳ ಸಾಂಸ್ಕೃತಿಕ ಸ್ಪರ್ಧೆಗಳ** ಕಾರ್ಯಕ್ರಮದಲ್ಲಿ ನಮ್ಮ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳು ಪಾಲ್ಗೊಂಡು ತಮ್ಮ ಪ್ರತಿಭೆಯನ್ನು ಪ್ರಸ್ತುಪಡಿಸಿರುತ್ತಾರೆ.

12. **ರೆಡ್ ಕ್ರಾಸ್ ಸಂಘ :** ನಮ್ಮ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳಿಗೆ ರಕ್ತದಾನ ಶಿಭಿರದಂತಹ ಆರೋಗ್ಯ ಜಾಗೃತಿಗಳ ಬಗ್ಗೆ ಅರಿವು ಮೂಡಿಸಲು ರೆಡ್ ಕ್ರಾಸ್ ಸಂಘವನ್ನು 2015 ನೇ ಸಾಲಿನಲ್ಲಿ ಸ್ಥಾಪಿಸಿ ಸಂಘದಡಿಯಲ್ಲಿ ನಮ್ಮ ಮಹಾವಿದ್ಯಾಲಯದಲ್ಲಿ ಪ್ರತಿ ವರ್ಷ ರಕ್ತದಾನ ಶಿಭಿರವನ್ನು ಏರ್ಪಡಿಸಿ ವಿದ್ಯಾರ್ಥಿಗಳಿಗೆ ರಕ್ತದಾನದ ಮಹತ್ವ ತಿಳಿಸಲಾಗಿದೆ. **ದಿನಾಂಕ:– 06–08–2018 ರಂದು ರಕ್ತದಾನ ಶಿಭಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಶಿಬಿರದಲ್ಲಿ ಮಹಾವಿದ್ಯಾಲಯದ ಉಪನ್ಯಾಸಕ ಹಾಗೂ ಪ್ರಶಿಕ್ಷಣಾರ್ಥಿಗಳು ಮತ್ತು ಇತರೆ ಹೊರ ರಕ್ತದಾನಿಗಳು ರಕ್ತದಾನ ಮಾಡಿದರು. ದಿನಾಂಕ : 25–08–2018 ರಂದು ಯುವ ರೆಡ್ಕ್ರಾಸ್ ಘಟಕದ ವತಿಯಿಂದ ಕೊಡಗು ಸಂತ್ರಸ್ತರ ಪರಿಹಾರ ನಿಧಿಹಾಗೂ 2019 ರಲ್ಲಿ ಸಂಭವಿಸಿದ ಉತ್ತರ ಕರ್ನಾಟಕ ಸಂತ್ರಸ್ತರ ಪರಿಹಾರ ನಿಧಿಗೆ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳು ಹಾಗೂ ಸಿಬ್ಬಂಧಿಯವರಿಂದ ದೇಣಿಗೆ ಪಡೆಯಲಾಯಿತು.**

**ಈ ರೀತಿ ನಮ್ಮ ಮಹಾವಿದ್ಯಾಲಯವು ಮೇಲಿನ ಎಲ್ಲಾ ಚಟುವಟಿಕೆಗಳನ್ನು ನಿರ್ವಹಿಸುತ್ತಾ ವಿದ್ಯಾಥಿಗಳ ಪ್ರಗತಿಗೆ ಸದಾ ಶ್ರಮಿಸುತ್ತಾ ಬಂದಿದೆ.**

ಎಚ್,ಟಿ.ವಿ.ಎಸ್.ಎಸ್.ಲಿ

## ಶ್ರೀ ತರಳಬಾಳು ಜಗ್ದಗುರು ಶಿಕ್ಷಣ ಮಹಾವಿದ್ಯಾಲಯ ಹಿರೇಕೆರೂರ. ಈ: ಹಾವೇರಿ

## 2017–18 ನೇ ಸಾಲಿನ ಬಿ.ಇಡಿ ಪ್ರಶಿಕ್ಷಣಾರ್ಥಿಗಳ ಪರೀಕ್ಷಾ ಫಲಿತಾಂಶದ ವಿವರ

| ವರ್ಷ | ವರ್ಗ | ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶದ ವಿವರ | ಪಾಸಾದವರ ಸಂಖ್ಯೆ | ಡಿಸ್ಟಿಂಕ್ಷನ್ | ಪ್ರಥಮ | ದ್ವಿತೀಯ | ಪ್ರತಿಶತ | ರ್‍ಯಾಂಕ್ ವಿವರ |
|---|---|---|---|---|---|---|---|---|
| 2009–10 | ಬಿ.ಇಡಿ | 95 | 90 | 26 | 55 | 09 | 94.73 | ವಿಶ್ವವಿದ್ಯಾಲಯಕ್ಕೆ ಮೂರು & ನಾಲ್ಕನೇ ರ್‍ಯಾಂಕ್ |
| 2010–11 | ಬಿ.ಇಡಿ | 86 | 84 | 43 | 36 | 05 | 97.67 | -- |
| 2011–12 | ಬಿ.ಇಡಿ | 97 | 91 | 46 | 44 | 01 | 93.81 | -- |
| 2012–13 | ಬಿ.ಇಡಿ | 93 | 90 | 61 | 26 | 03 | 96.77 | ವಿಶ್ವವಿದ್ಯಾಲಯಕ್ಕೆ ಪ್ರಥಮ & ನಾಲ್ಕನೇ ರ್‍ಯಾಂಕ್ |
| 2013–14 | ಬಿ.ಇಡಿ | 93 | 93 | 71 | 20 | 02 | 100 | ವಿಶ್ವವಿದ್ಯಾಲಯಕ್ಕೆ ಮೂರನೇ ರ್‍ಯಾಂಕ್ |
| 2014–15 | ಬಿ.ಇಡಿ | 97 | 94 | 72 | 20 | 02 | 96.90 | ವಿಶ್ವವಿದ್ಯಾಲಯಕ್ಕೆ ಐದನೇ ರ್‍ಯಾಂಕ್ |
| 2015–16 | ಬಿ.ಇಡಿ | 66 | 66 | -- | -- | -- | 100 | -- |
| 2016–17 | ಬಿ.ಇಡಿ | 64 | 62 | 56 | 06 | -- | 96.87 | ಮನೋವಿಜ್ಞಾನ ವಿಷಯದಲ್ಲಿ ವಿಶ್ವವಿದ್ಯಾಲಯಕ್ಕೆ ಪ್ರಥಮ ರ್‍ಯಾಂಕ್ (ಗೋಲ್ಡ್ ಮೆಡಲ್) |
| 2017–18 | ಬಿ.ಇಡಿ | 66 | 64 | 59 | 05 | -- | 96.96 | -- |
| 2018–19 | ಬಿ.ಇಡಿ | 69 | 63 | 58 | 05 | -- | 91.30 | -- |



WEL - COME
WEL-COME
WEL-COME


PERIODIC TABLE OF THE ELEMENTS-LONG FORM


S.T.J. College of Education HKR.
S.T.J. College of Education HKR.




B. Ed COLLEGE
SRI TARALAB ALU JAGADGURU
COLLEGE C F EDUCATION
HIREI ERUR.


HEARTY WELCOME
TO
NCTE COMMITTEE
Reebok
STRIKER
PUMA










A
ಲಘು ಕಂಸ
X
O
B
Y
ಅಧಿಕ ಕಂಸ




S T J BED COLLEGE
HIREKERUR






S.T.J. COLLEGE OF EDUCATION
HEARTY-WEL COME
TO
NCTE - COMMITTEE


Aristotle
William Wordsworth






ಸ್ವಾಮಿ ವಿವೇಕಾನಂದ.
SAROJINI NAIDU



